ಅಧ್ಯಾಯ-೯

ಶಿಕ್ಷಣ ಮತ್ತು ಕ್ರೀಡೆ

ಹುಣಸೂರು ತಾಲೂಕಿನಲ್ಲಿ ಹಿಂದಿನಿಂದಲೂ ಶಿಕ್ಷಣಕ್ಕೆ ಪ್ರಾಶಸ್ತ್ಯವಿದ್ದಿತು. ಹಲವಾರು ಸುಪ್ರಸಿದ್ಧ ಶಿಕ್ಷಣ ಕೇಂದ್ರಗಳು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ವೈದಿಕ ಶಿಕ್ಷಣ ಮೊದಲಿನಿಂದಲೂ ಪ್ರಚಾರದಲ್ಲಿದ್ದಿತು. ಮಕ್ಕಳ ಪ್ರಾಥಮಿಕ ಶಿಕ್ಷಣ ಸಾಮಾನ್ಯವಾಗಿ ಗುರುಕುಲಗಳಲ್ಲಿ ನಡೆಯುತ್ತಿತ್ತು. ಬ್ರಾಹ್ಮಣ ವಿದ್ಯಾರ್ಥಿಗಳು ಗ್ರಾಂಥಿಕ ಶಿಕ್ಷಣವನ್ನೂ, ಕ್ಷತ್ರಿಯರು ಆಡಳಿತಶಾಸ್ತ್ರ ಹಾಗೂ ಶಸ್ತ್ರಾಸ್ತ್ರಗಳ ಪರಿಚಯ, ಯುದ್ಧಸಂಬಂಧಿ ಕಾರ್ಯಚರಣೆ, ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಶಿಕ್ಷಣಗಳನ್ನು ಪಡೆಯುತ್ತಿದ್ದರು. ವೈಶ್ಯರು ಮನೆಗಳಲ್ಲಿ ವಾಣಿಜ್ಯ ವಿದ್ಯೆಯನ್ನೂ, ಗುರುಕುಲಗಳಲ್ಲಿ ಸಾಂಸ್ಕೃತಿಕ ಶಿಕ್ಷಣವನ್ನೂ ಪಡೆಯುತ್ತಿದ್ದರು. ಅನುವಂಶೀಯವಾಗಿದ್ದ ಕಸಬುಗಳಲ್ಲಿ ಹಿರಿಯರು ತಮ್ಮ ಕುಟುಂಬಗಳಲ್ಲಿಯೇ ಕಿರಿಯರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಇವುಗಳ ಜತೆಗೆ ಹಲವಾರು ಜೈನ ಶಿಕ್ಷಣ ಕೇಂದ್ರಗಳೂ ಅಸ್ತಿತ್ವದಲ್ಲಿದ್ದು, ಇವುಗಳಲ್ಲಿ ಪುನ್ನಾಟ ನಾಡಿನ ಜೈನ ಕೇಂದ್ರವಾದ ಕೀರ್ತಿಪುರವೂ ಪ್ರಮುಖ ಶಿಕ್ಷಣ ಕೇಂದ್ರವಾಗಿತ್ತು. ಜೊತೆಗೆ ಹಲವಾರು ದೇವಾಲಯಗಳೂ ವ್ಯವಸ್ಥಿತ ಶಿಕ್ಷಣ ಕೇಂದ್ರಗಳಾಗಿದ್ದವು. ಅಗ್ರಹಾರ ಹಾಗೂ ದೇವಾಲಯಗಳಲ್ಲಿ ನಡೆಯುತ್ತಿದ್ದ ಕಲಿಕಾ ಕೇಂದ್ರಗಳಿಗೆ ರಾಜಮಹಾರಾಜರ ಬೆಂಬಲ ಪ್ರೋತ್ಸಾಹಗಳು ದೊರೆಯುತ್ತಿದ್ದವು. ಮೈಸೂರು ಒಡೆಯರ ಕಾಲಕ್ಕೆ ಹಲವಾರು ಕಲಿಕಾ ಕೇಂದ್ರಗಳು ಪುನಶ್ಚೇತನಗೊಂಡವು. ಅದರಂತೆ ಹುಣಸೂರು ತಾಲೂಕಿನಲ್ಲೂ ಕಲಿಕಾ ಕೇಂದ್ರಗಳು ಪುನಶ್ಚೇತನಗೊಂಡವು.

ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳಿಗೆ ಓದುಬರಹ ಕಲಿಸುವ ಶಾಲೆಗಳು ಅಸ್ತಿತ್ವದಲ್ಲಿದ್ದವು. ಮಕ್ಕಳ ಪೋಷಕರು ದವಸ-ಧಾನ್ಯಗಳ ರೂಪದಲ್ಲಿ ಬೋಧಕರಿಗೆ ಸಂಭಾವನೆ ನೀಡುತ್ತಿದ್ದರು. ಶ್ರೀಮಂತರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತಮ್ಮ ತಮ್ಮ ಮನೆಗಳಲ್ಲಿಯೇ ಶಿಕ್ಷಣ ನೀಡುವ ಏರ್ಪಾಡು ಮಾಡಿಕೊಂಡಿದ್ದರು. 'ಕೂಲಿ ಮಠ'ಗಳೆಂದು ಕರೆಯಲ್ಪಡುತ್ತಿದ್ದ ಊರಿನ ಶಾಲೆಗಳು ಸಾಮಾನ್ಯವಾಗಿ ಛತ್ರ, ಚಾವಡಿ ಅಥವಾ ದೇವಸ್ಥಾನಗಳ ಜಗಲಿಗಳ ಮೇಲೆ ನಡೆಯುತ್ತಿದ್ದವು. ಓದು, ಬರಹ ಗಣಿತಗಳಲ್ಲದೇ

ರಾಮಾಯಣ, ಮಹಾಭಾರತ, ಭಗವದ್ಗೀತೆ ಹಾಗೂ ಭಾಗವತ ಪಠಣವನ್ನೂ ಹೇಳಿಕೊಡಲಾಗುತ್ತಿತ್ತು.

ರಾಜ್ಯದಲ್ಲಿ ಬ್ರಿಟಿಷರ ಆಡಳಿತಾವಧಿಯ ಆರಂಭ ಕಾಲವನ್ನು ಸಂಕ್ರಮಣ ಕಾಲವೆನ್ನಬಹುದು. ಇವರ ಕಾಲದಲ್ಲಿ ಅಗ್ರಹಾರಗಳು ಮಾಯವಾಗುತ್ತಾ ಬಂದವಲ್ಲದೆ, ದೇವಾಲಯಗಳಲ್ಲಿ ಹೇಳಿಕೊಡುತಿದ್ದ ವೈದಿಕ ಶಿಕ್ಷಣ ಕ್ರಮವೂ ಸೊರಗಿತು. ಅನಂತರ ಅಯ್ಯನವರ ಕೂಲಿಮಠಗಳು ತಲೆಎತ್ತಿದವು. ಸಾಮಾನ್ಯ ಓದು ಬರೆಹ ಹಾಗೂ ಲೆಕ್ಕಗಳು ಶಿಕ್ಷಣದ ವಿಷಯಗಳಾದವು. ಆ ವೇಳೆಗಾಗಲೇ ಕ್ರೈಸ್ತ ಧರ್ಮದ ಪ್ರಚಾರವೂ ಭರದಿಂದ ಮುಂದುವರೆದಿತ್ತು. ತಮ್ಮ ಮತ ಪ್ರಚಾರಕ್ಕಾಗಿ ಕ್ರೈಸ್ತ ಪಾದ್ರಿಗಳು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ್ದರಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಯಾಗಿ ಇಂಗ್ಲಿಷ್ ಭಾಷೆಯ ಕಲಿಕೆ ಹಾಗೂ ಇಂಗ್ಲಿಷ್ ಶಿಕ್ಷಣ ಪದ್ಧತಿಗಳನ್ನು ಶಿಕ್ಷಣಾರ್ಥಿಗಳು ಹಾರ್ದಿಕವಾಗಿ ಸ್ವಾಗತಿಸಿದರು. ವಿಜ್ಞಾನ ವಿಷಯಗಳ ಕಲಿಕೆಯ ನೆಪದಲ್ಲಿ ಇಂಗ್ಲಿಷ್ ಶಿಕ್ಷಣ ಭರದಿಂದ ಸಾಗಿತು. ಇದರಿಂದಾಗಿ ಸಂಸ್ಕೃತ ತನ್ನ ಪ್ರಾಶಸ್ತ್ಯವನ್ನು ಕಳೆದುಕೊಂಡಿತ್ತಲ್ಲದೆ ದೇಶೀಯ ಭಾಷೆಗಳು ಎರಡನೆಯ ದರ್ಜೆಗೆ ಇಳಿಸಲ್ಪಟ್ಟವು. ಆದರೆ ಮುಸ್ಲಿಂ ಶಿಕ್ಷಣ ಪದ್ಧತಿ ಮಸೀದಿ ಹಾಗೂ ಮಕ್ತಬಾಗಳಲ್ಲಿ ನಿರಾತಂಕವಾಗಿ ಸಾಗಿತ್ತು. ದೇವಾಲಯ ಹಾಗೂ ಆಗ್ರಹಾರಗಳಲ್ಲಿದ್ದ ಹಿಂದೂ ಶಿಕ್ಷಣ, ಅಯ್ಯನವರ ಕೂಲಿಮಠಗಳಲ್ಲಿ ಮಾತ್ರ ಉಳಿದಿತ್ತಾದರೂ ಆ ಕೂಲಿ ಮಠಗಳೂ ಸಾರ್ವತ್ರಿಕ ಶಿಕ್ಷಣವನ್ನೇನೂ ನೀಡಲಿಲ್ಲ.

೧೮೫೪ರಲ್ಲಿ ವುಡ್ಸ್‌ನ ವರದಿಯ ನಂತರ ಭಾರತದಲ್ಲಿ ಉಂಟಾದ ಹೊಸ ಶಿಕ್ಷಣ ನೀತಿ ರಾಜ್ಯದ ಎಲ್ಲೆಡೆ ತನ್ನ ಪ್ರಭಾವ ಬೀರಿತು. ಮೈಸೂರು ಸಂಸ್ಥಾನದಲ್ಲಿ ೧೮೫೭ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಾರಂಭವಾಯಿತು. ಬೆಂಗಳೂರಿನಲ್ಲಿ ೧೮೭೮ರಲ್ಲಿ ಪಠ್ಯಪುಸ್ತಕಗಳ ಮುದ್ರಾಣಾಲಯ ಪ್ರಾರಂಭವಾಯಿತು. ಅಯ್ಯನವರ ಕೂಲಿಮಠಗಳಲ್ಲಿ ಶಿಕ್ಷಣ ಇಲಾಖೆ ರೂಪಿಸಿದ ಇಂಗ್ಲಿಷ್ ಮಾದರಿಯ ಪಠ್ಯಕ್ರಮ ಜಾರಿಗೆ ಬಂದಿತಲ್ಲದೆ, ಅಧ್ಯಾಪಕರ ತರಬೇತಿಗಾಗಿ ನಾರ್ಮಲ್ ಶಾಲೆಗಳು ಪ್ರಾರಂಭಗೊಂಡವು.

ಒಂಬತ್ತು ರೂಪಾಯಿಗಿಂತ ಹೆಚ್ಚಿನ ವೇತನ ಪಡೆಯುತ್ತಿದ್ದ ಸರ್ಕಾರಿ ನೌಕರರು ಮಾತ್ರ ಭಾಷೆ ಓದಲು, ಬರೆಯಲು ಬಲ್ಲವರಾಗಿರಬೇಕೆಂದು ೧೮೬೪ರಲ್ಲಿ ಸರ್ಕಾರ ಕಾನೂನು ಜಾರಿಗೊಳಿಸಿತು. ಅಂದಿನ ಶಿಕ್ಷಣ ಇಲಾಖೆಯ ಮುಖ್ಯಸ್ಥರಾದ ಬಿ.ಎಲ್. ರೈಸ್‌ರವರು ಕಾನೂನಿನ ಅನುಷ್ಠಾನಕ್ಕೆ ಎಲ್ಲ ಹೋಬಳಿ ಕೇಂದ್ರದಲ್ಲಿ ಒಂದು ಸರ್ಕಾರಿ ಕಿರಿಯ ಹಾಗೂ ತಾಲೂಕು ಕೇಂದ್ರಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಯನ್ನೂ, ಜಿಲ್ಲಾ ಕೇಂದ್ರದಲ್ಲಿ ಮೆಟ್ರಿಕ್ಯುಲೇಷನ್‌ವರೆಗೆ ಶಿಕ್ಷಣ ನೀಡುವ ಪ್ರೌಢಶಾಲೆಯನ್ನೂ ಆರಂಭಗೊಳಿಸಿದರು. ಇಪ್ಪತ್ತು ರೂಪಾಯಿ ಮಾಸಿಕ ವೇತನ ಪಡೆಯುವ ಸರ್ಕಾರಿ ಹುದ್ದೆಗಳಿಗೆ ಇಂಗ್ಲಿಷನ್ನೊಳಗೊಂಡ ಸಾಮಾನ್ಯ ಶಿಕ್ಷಣ ಪರೀಕ್ಷೆ ಕಡ್ಡಾಯವಾಯಿತು.

ಇದರಿಂದಾಗಿ ಇಂಗ್ಲಿಷ್ ಶಿಕ್ಷಣದ ಪ್ರಾಮುಖ್ಯತೆ ಹೆಚ್ಚಿತು. ಆದರೆ ಹುಣಸೂರು ತಾಲೂಕಿನಲ್ಲಿ ಹೆಚ್ಚಿನ ಪ್ರಗತಿ ಕಂಡುಬರಲಿಲ್ಲ.

ಸಾಕ್ಷರತೆ : ಹುಣಸೂರು ತಾಲೂಕಿನ ಸಾಕ್ಷರತೆಯ ಪ್ರಮಾಣ ಕರ್ನಾಟಕ ರಾಜ್ಯ ಹಾಗೂ ಮೈಸೂರು ಜಿಲ್ಲೆಯ ಒಟ್ಟು ಪ್ರಮಾಣಕ್ಕಿಂತ ಕಡಿಮೆ ಇದೆ. ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀತಿ ಜಾರಿಯಾದ ನಂತರವೂ ತಾಲೂಕಿನಲ್ಲಿ ಅಕ್ಷರಸ್ಥರ ಪ್ರಮಾಣದಲ್ಲಿ ಗಣನೀಯವಾದ ಹೆಚ್ಚಳ ಕಂಡು ಬರಲಿಲ್ಲ. ೧೮೯೧ರ ಜನಗಣತಿಯಲ್ಲಿ ಅಕ್ಷರಸ್ಥರ ಮತ್ತು ಅನಕ್ಷರಸ್ಥರ ಪ್ರಮಾಣ ಹಾಗೂ ಶೇಕಡಾವಾರು ಅಂಕಿಅಂಶಗಳನ್ನು ನಿಖರವಾಗಿ ದಾಖಲಿಸಿರುವುದಿಲ್ಲ. ಆ ದಶಕದಲ್ಲಿ ಪಂಡಿತರು, ಅಕ್ಷರಸ್ಥರು ಹಾಗೂ ಅನಕ್ಷರಸ್ಥರೆಂದು ಮಾತ್ರ ಜನಗಣತಿ ಮಾಡಲಾಯಿತು. ಇದರಿಂದಾಗಿ ಗೊಂದಲವೇರ್ಪಟ್ಟದ್ದರಿಂದ ೧೯೦೧ರ ಜನಗಣತಿಯಲ್ಲಿ ಅಕ್ಷರಸ್ಥರು ಹಾಗೂ ಅನಕ್ಷರಸ್ಥರೆಂದು ಜನಸಂಖ್ಯೆಯನ್ನು ಎರಡೇ ವರ್ಗಗಳಾಗಿ ವಿಂಗಡಿಸಲಾಯಿತು. ಅಂದಿನ ದಿನಗಳಲ್ಲಿ ತಾಲೂಕು ನೀರಿನ ಆಭಾವದಿಂದಾಗಿ ಬೆಂಗಾಡಾಗಿದ್ದು, ಬಡತನ ಹಾಗೂ ಅನಕ್ಷರಸ್ಥತೆಗಳಿಂದ ಕೂಡಿದ್ದಿತು. ಅಗ್ರಹಾರ ಹಾಗೂ ಮಠಗಳಂತಹ ಕಲಿಕಾ ಕೇಂದ್ರಗಳೂ ಪ್ರೋತ್ಸಾಹವಿಲ್ಲದೆ ಸೊರಗಿದ್ದವು. ಸುಶಿಕ್ಷಿತರು ಮೈಸೂರು-ಬೆಂಗಳೂರಂತಹ ಪಟ್ಟಣಗಳಿಗೆ ವಲಸೆ ಹೋಗಿದ್ದರು. ಆದುದರಿಂದ ಆ ಕಾಲದ ಸಾಕ್ಷರತೆ ಸಹಜವಾಗಿ ಅತಿ ಕಡಿಮೆ ಇದ್ದಿತು. ತಾಲೂಕಿನ ಸಾಕ್ಷರತೆ ಪ್ರಮಾಣ ೨೦೦೧ರ ಜನಗಣತಿಯಂತೆ- ಗ್ರಾಮೀಣ ಗಂಡು ೬೪.೦೭, ಹೆಣ್ಣು ೪೩.೧೭ ಒಟ್ಟು ೫೩.೮೩, ನಗರ: ಗಂಡು ೮೪.೧೩, ಹೆಣ್ಣು ೭೧.೩೬ ಒಟ್ಟು ೭೭.೮೫. ಒಟ್ಟು ಗಂಡು ೬೭.೫೩, ಹೆಣ್ಣು ೪೮.೦೬, ಒಟ್ಟು ೫೭.೯೯.

ಪೂರ್ವ ಪ್ರಾಥಮಿಕ ಶಿಕ್ಷಣ : ಪ್ರಾಥಮಿಕ ಶಿಕ್ಷಣದ ವಿಸ್ತರಣೆಯೊಡನೆಯೇ ಶಿಶು ವಿಹಾರಗಳು ಪ್ರಾರಂಭವಾಗಿ ಪೂರ್ವಪ್ರಾಥಮಿಕ ಶಿಕ್ಷಣದ ಅಗತ್ಯ ಹಾಗೂ ಪ್ರಾಮುಖ್ಯತೆಯನ್ನು ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳು ಮನಗಂಡಿದ್ದರೂ, ಇದರ ಬೆಳೆವಣಿಗೆ ವೈಜ್ಞಾನಿಕ ಚೌಕಟ್ಟಿಗೆ ಒಳಪಟ್ಟಿದ್ದು ೧೯೭೦ರ ನಂತರವೇ. ಪಂಚವಾರ್ಷಿಕ ಯೋಜನೆಗಳಲ್ಲಿಯೂ ಒತ್ತುಸಿಕ್ಕಿ ಪೋಷಕರು ತಮ್ಮ ಮಕ್ಕಳನ್ನು ಪ್ರಾಥಮಿಕ ಶಾಲೆಗಳಿಗೆ ಸೇರಿಸುವ ಮುನ್ನ ಅವರಿಗೆ ಶಾಲೆಯ ಶಿಸ್ತಿನ ಬಗ್ಗೆ ಕಾರ್ಯಚಟುವಟಿಕೆಗಳ ಬಗ್ಗೆ, ಮುಖ್ಯವಾಗಿ ಅವರಲ್ಲಿ ಶಾಲೆಗೆ ಹೋಗುವ ಅಭ್ಯಾಸ ಬೆಳೆಸುವ ಬಗ್ಗೆ, ಮಾನಸಿಕ ತಯಾರಿ ನೀಡಲು ಪೂರ್ವ ಪ್ರಾರ್ಥಮಿಕ ಶಾಲೆಗಳು ಸೂಕ್ತವೆಂಬ ಸಂಗತಿಯನ್ನು ಮನಗಂಡರು. ಇಲ್ಲಿ ಯಾವುದೇ ಔಪಚಾರಿಕ ಶಿಕ್ಷಣ ನೀಡುವುದಿಲ್ಲ. ಇದು ರಾಜ್ಯ ಸರ್ಕಾರದ ಹೊಣೆಯಾದರೂ ಖಾಸಗಿ ಸಂಘಸಂಸ್ಥೆಗಳು ಶಿಶುವಿಹಾರಗಳ ಮೂಲಕ ಅದನ್ನು ಪೂರೈಸುತ್ತಿವೆ. ಮೂರರಿಂದ ಆರು ವರ್ಷದೊಳಗಿನ ಮಕ್ಕಳು ಇದರ ವ್ಯಾಪ್ತಿಯೊಳಗೆ ಬರುತ್ತಾರೆ. ೨೦೦೯ರಲ್ಲಿ ತಾಲೂಕಿನಲ್ಲಿ ೧೯೭ ಅಂಗನವಾಡಿ ಕೇಂದ್ರಗಳಿದ್ದವು.

ಪ್ರಾಥಮಿಕ ಶಿಕ್ಷಣ : ಅನಕ್ಷರತೆ ಹೋಗಲಾಡಿಸಿ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಮಾರ್ಗೋಪಾಯಗಳನ್ನು ಸೂಚಿಸಲು ಅಂದಿನ ಸರ್ಕಾರ ೧೯೩೭ರಲ್ಲಿ ಸಮಿತಿಯೊಂದನ್ನು ರಚಿಸಿತು. ಈ ಸಮಿತಿ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರವೇ ವಹಿಸಿಕೊಳ್ಳುವುದು ಸೂಕ್ತವೆಂದು ಶಿಫಾರಸ್ಸು ಮಾಡಿತು. ಅದರಂತೆ ಸರ್ಕಾರ, ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ದೊರೆಯುವ ವ್ಯವಸ್ಥೆ ಮಾಡಿತು. ಸ್ಥಳೀಯ ಖಾಸಗಿ ಶಿಕ್ಷಣ ಸಂಸ್ಥೆಗಳೂ ಈ ದೆಶೆಯಲ್ಲಿ ಗಮನಾರ್ಹ ಸೇವೆ ಸಲ್ಲಿಸಿವೆ. ಪ್ರಾಥಮಿಕ ಹಂತದ ವಿದ್ಯಾಭ್ಯಾಸ ಕ್ರಮವನ್ನು ಉತ್ತಮಪಡಿಸಲು ೧೯೪೧ರಲ್ಲಿ ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ನು ಸರ್ಕಾರ ಜಾರಿಗೊಳಿಸಿತು. ಇದರಂತೆ ಪಟ್ಟಣ ಪ್ರದೇಶಗಳಲ್ಲಿ ೫೦೦ ಜನಸಂಖ್ಯೆ, ಗ್ರಾಮಾಂತರ ಪ್ರದೇಶದಲ್ಲಿ ३೦೦ ಜನಸಂಖ್ಯೆಗೆ ತಲಾ ಒಂದರಂತೆ, ಒಂದರಿಂದ ನಾಲ್ಕನೆಯ ತರಗತಿಗಳನ್ನೊಳಗೊಂಡ ಕಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಯಿತು. ಈ ಶಾಲೆಗಳಲ್ಲಿ ಭಾಷೆಗಳ ಜೊತೆಗೆ ಚರಿತ್ರೆ, ಭೂಗೋಳ, ಗಣಿತ, ಸಂಗೀತ, ಪ್ರಕೃತಿಪಾಠ ಹಾಗೂ ನೀತಿಪಾಠಗಳನ್ನು ಬೋಧಿಸಲಾಗುತ್ತಿತ್ತು. ಮೇಲಿನ ನಾಲ್ಕು ತರಗತಿಗಳ ನಂತರ ಶಿಕ್ಷಣ ಮುಂದುವರೆಸಲು ಮೂರು ವರ್ಷ ಅವಧಿಯ ಮಾಧ್ಯಮಿಕ ಶಾಲೆಗಳನ್ನು ನ್ಯೂಟೈಪ್‌ಮಿಡ್ಲ್ ಸ್ಕೂಲ್ (ಎನ್.ಟಿ.ಎಂ.ಎಸ್)ಎಂಬ ಹೆಸರಿನಲ್ಲಿ ಪ್ರಾರಂಭಿಸಲಾಯಿತು. ೧೯೬೧ರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆಯು ಈ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿತು. ೧೯೬೧-೬೨ರಿಂದ ಪ್ರಾರಂಭಿಸಿ, ೧೯೬೫-೬೬ರ ಒಳಗಿನ ಅವಧಿಯಲ್ಲಿ ೬ ರಿಂದ ೧೧ ವರ್ಷ ವಯೋಮಾನದ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿಯೂ, ಉಚಿತವಾಗಿಯೂ, ನೀಡಬೇಕೆಂದು ಆಜ್ಞೆ ಮಾಡಿತು. ಇತ್ತೀಚಿನ ದಶಕಗಳಲ್ಲಿ ಸರ್ಕಾರದ ನೂತನ ಶಿಕ್ಷಣ ಯೋಜನೆಗಳಡಿ ಪ್ರಾಥಮಿಕ ಶಿಕ್ಷಣಕ್ಕೆ ವ್ಯಾಪಕ ಪ್ರಚಾರ ದೊರಕಿ, ತಾಲೂಕಿನಲ್ಲಿ ಈ ಹಂತದ ಶಿಕ್ಷಣ ಗಣನೀಯ ಪ್ರಗತಿ ಸಾಧಿಸಿದೆ. ೨೦೦೫ ರಂತೆ ಹುಣಸೂರು ತಾಲೂಕಿನಲ್ಲಿ ३೦೨ ಪ್ರಾಥಮಿಕ ಶಾಲೆಗಳಿದ್ದು ಈ ಶಾಲೆಗಳಲ್ಲಿ ೧೯೩೭೨ ಗಂಡು ಹಾಗೂ ೧೮೪೦೦ ಹೆಣ್ಣುಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಪ್ರಾಥಮಿಕ ಶಿಕ್ಷಣವನ್ನು ಅಭಿವೃದ್ಧಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಹಲವು ಯೋಜನೆಗಳನ್ನು ಜಾರಿಗೊಳಿಸಿವೆ.

ಮಧ್ಯಾಹ್ನ ಬಿಸಿಯೂಟ, ವಿದ್ಯಾವಿಕಾಸ ಯೋಜನೆ, ಕಪ್ಪು ಹಲಗೆ ಕಾರ್ಯಾಚರಣೆ, ಸಮುದಾಯದತ್ತ ಶಾಲೆ ಯೋಜನೆ, ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ) ಶಾಲಾದತ್ತು ಯೋಜನೆ, ಉರ್ದು ಹಾಗೂ ಇತರ ಅಲ್ಪಸಂಖ್ಯಾತರ ಶಿಕ್ಷಣ ಯೋಜನೆ, ಸರ್ವಶಿಕ್ಷಣ ಅಭಿಯಾನ ಇವೇ ಮುಂತಾದ ಯೋಜನೆಗಳಿಂದ ತಾಲೂಕಿನಲ್ಲಿ ಪ್ರಾಥಮಿಕ ಶಿಕ್ಷಣ ಪ್ರಗತಿಯತ್ತ ಸಾಗಿದೆ.

ತಾಲೂಕಿನಲ್ಲಿ ೨೦೦೬-೦೭ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ (ವಿಷಯವಾರು) ವಿವರ ಹೀಗಿದ್ದಿತು. ಒಬ್ಬ ಪದವೀಧರ ಮುಖ್ಯ ಶಿಕ್ಷಕರು, ಮೂವರು ಪದವೀಧರರಲ್ಲದ, ಮುಖ್ಯ ಶಿಕ್ಷಕರು, ೪೨ ಮಂದಿ ಬಡ್ತಿ ಮುಖ್ಯಶಿಕ್ಷಕರು (ಕನ್ನಡ), ಒಬ್ಬ ಬಡ್ತಿ ಮುಖ್ಯ ಶಿಕ್ಷಕ (ಉರ್ದು), ೮೧೧ ಮಂದಿ ಸಹಶಿಕ್ಷಕರು

(ಕನ್ನಡ), ೩೨ ಮಂದಿ ಸಹಶಿಕ್ಷಕರು (ವಿಜ್ಞಾನ), ಒಂಬತ್ತು ಮಂದಿ ಸಹಶಿಕ್ಷಕರು (ಇಂಗ್ಲಿಷ್), ೪೦ ಮಂದಿ ದೈಹಿಕ ಶಿಕ್ಷಕರು ಸೇರಿದಂತೆ ಒಟ್ಟು ೯೯೭ ಮಂದಿ ಶಿಕ್ಷಕರು ಶಿಕ್ಷಣ ಬೋಧಿಸುತ್ತಿದ್ದಾರೆ. ಇದೇ ಅವಧಿಯಲ್ಲಿ ೧೯,೭೨೭ ಗಂಡು ಮಕ್ಕಳು, ೧೯,೦೫೬ ಹೆಣ್ಣು ಮಕ್ಕಳು ಒಟ್ಟು ೩೮,೭೮೩ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದರು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನ ೩೩೬ ಪ್ರಾಥಮಿಕ ಶಾಲೆಗಳಲ್ಲಿ ೧೭,೬೬೭ ಬಾಲಕರು ಹಾಗೂ ೧೭,೦೨೩ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು.

ಪ್ರೌಢ ಶಿಕ್ಷಣ : ತಾಲೂಕಿನಲ್ಲಿ ಸ್ವಾತಂತ್ರಪೂರ್ವದ ಪ್ರೌಢಶಾಲೆಗಳ ಬಗ್ಗೆ ಮಾಹಿತಿ ಇಲ್ಲ. ಸ್ವಾತಂತ್ರ್ಯಾನಂತರ ರಚಿತವಾದ ಶಿಕ್ಷಣ ಆಯೋಗಗಳಾದ ಡಾ. ರಾಧಾಕೃಷ್ಣನ್ ಆಯೋಗ (೧೯೪೮) ಸೆಕೆಂಡರಿ ಶಿಕ್ಷಣ ಆಯೋಗ (೧೯೫೩) ಮತ್ತು ಕೊಠಾರಿ ಶಿಕ್ಷಣ ಆಯೋಗ (೧೯೬೪)ಗಳು ನಡೆಸಿದ ಚಿಂತನೆಗಳಿಂದಲೂ ನೀಡಿದ ಸಲಹೆಗಳಿಂದಲೂ ಶಿಕ್ಷಣ ಕ್ಷೇತ್ರ ವಿಸ್ತಾರಗೊಂಡು ಸೂಕ್ತ ಬದಲಾವಣೆಗಳಾದವು. ನಾಲ್ಕು ವರ್ಷದ ಪ್ರಾಥಮಿಕ ಹಂತ, ಮೂರು ವರ್ಷದ ಮಾಧ್ಯಮಿಕ (ಹಿರಿಯ ಪ್ರಾಥಮಿಕ) ಹಂತ, ಮೂರು ವರ್ಷದ ಪ್ರೌಢ ಹಾಗೂ ಎರಡು ವರ್ಷದ ಪದವಿಪೂರ್ವ ಶಿಕ್ಷಣ ಹಂತಗಳು ಶಿಫಾರಸ್ಸಾಗಿ ಜಾರಿಗೊಂಡವು.

ಹುಣಸೂರು ತಾಲೂಕಿನ ಪ್ರಥಮ ಪ್ರೌಢಶಾಲೆ ೧೯೫೨ರಲ್ಲಿ ಹುಣಸೂರು ಪಟ್ಟಣದಲ್ಲಿ ಪ್ರಾರಂಭಗೊಂಡು, ಇಲ್ಲಿ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜು ಸ್ಥಾಪನೆಗೊಂಡಿತು. ಖಾಸಗೀ ಪ್ರೌಢಶಾಲೆ (೧೯೫೬) ಹುಣಸೂರು ಪಟ್ಟಣದಲ್ಲಿ ಸಂತಜೋಸೆಫ್ ಶಾಲೆ ಪ್ರಾರಂಭಗೊಂಡ ನಂತರ ತಾಲೂಕಿನಲ್ಲಿ ಪ್ರೌಢಶಿಕ್ಷಣ ಕಲಿಕೆಗೆ ಅವಕಾಶ ಹೆಚ್ಚಾಯಿತು. ಇದಕ್ಕೂ ಮೊದಲು ಪ್ರೌಢಶಿಕ್ಷಣ ಪಡೆಯಲು ಮೈಸೂರು ಹಾಗೂ ಮತ್ತಿತ್ತರ ಕಡೆಗಳಿಗೆ ಹೋಗಬೇಕಾಗುತ್ತಿತ್ತು. ಪ್ರಸ್ತುತ ತಾಲೂಕಿನಾದ್ಯಂತ ಸರ್ಕಾರಿ ಹಾಗೂ ಖಾಸಗೀ ಪ್ರೌಢಶಾಲೆಗಳಿದ್ದು, ಪ್ರೌಢಶಿಕ್ಷಣಕ್ಕೆ ಹೆಚ್ಚಿನ ಅವಕಾಶ ದೊರೆತಿದೆ. ೨೦೦೯ರ ಮಾಹಿತಿಯಂತೆ ತಾಲೂಕಿನಲ್ಲಿರುವ ೫೧ ಪ್ರೌಢಶಾಲೆಗಳಲ್ಲಿ ೬,೧೧೦ ಬಾಲಕರೂ ಹಾಗೂ ೬,೦೦೭ ಬಾಲಕಿಯರೂ ವ್ಯಾಸಂಗ ಮಾಡುತ್ತಿದ್ದರು.

ಪದವಿಪೂರ್ವ ಶಿಕ್ಷಣ : ೧೯೭೨ರಲ್ಲಿ ಎರಡು ವರ್ಷದ ಪಿ.ಯು.ಸಿ ಶಿಕ್ಷಣಕ್ರಮ ಕರ್ನಾಟಕದಾದ್ಯಂತ ಜಾರಿಯಾಗಿ ಹುಣಸೂರಿನಲ್ಲೂ ಪ್ರಾರಂಭವಾಯಿತು. ಪ್ರಥಮದರ್ಜೆ ಕಾಲೇಜುಗಳಲ್ಲಿ ಹಾಗೂ ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ನಡೆಯುತ್ತಿದ್ದ ಒಂದು ವರ್ಷದ ಪಿ.ಯು.ಸಿ. ತರಗತಿಗಳು ರದ್ದಾದವು. ನೂತನ ಶಿಕ್ಷಣ ಪದ್ಧತಿಯನ್ವಯ ೧೦+೨+೩ರ ಶಿಕ್ಷಣ ನಿಯಮ ಜಾರಿಯಾಯಿತು. ಶೈಕ್ಷಣಿಕ ವರ್ಷ ೧೯೭೯ರಲ್ಲಿ ಎರಡು ಭಾಷೆ ಹಾಗೂ ನಾಲ್ಕು ಐಚ್ಛಿಕ ವಿಷಯಗಳನ್ನೊಳಗೊಂಡ ಪಠ್ಯಕ್ರಮ ಪ್ರಾರಂಭಗೊಂಡು ಪದವಿಪೂರ್ವ ಕಾಲೇಜುಗಳ ಆಡಳಿತ ನೋಡಿಕೊಳ್ಳಲು ಪದವಿ ಪೂರ್ವ ಶಿಕ್ಷಣ ಮಂಡಳಿಯೂ ಅಸ್ತಿತ್ವಕ್ಕೆ ಬಂದಿತು. ೨೦೦೫ರ ಮಾಹಿತಿಯಂತೆ ಹುಣಸೂರು ತಾಲೂಕಿನಲ್ಲಿ ಎಂಟು ಪದವಿಪೂರ್ವ ಕಾಲೇಜುಗಳಿದ್ದು, ೧೪೪೯

ವಿದ್ಯಾರ್ಥಿ ಹಾಗೂ ೧೦೧೪ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದರು. ಇತ್ತೀಚೆಗೆ ತಾಲೂಕಿನಲ್ಲಿ ಪದವಿ ಪೂರ್ವ ಶಿಕ್ಷಣ ಪಡೆಯುವವರ ಸಂಖ್ಯೆ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. ಜೊತೆಗೆ ತಾಲೂಕಿನಲ್ಲಿ ವಸತಿ ಮತ್ತು ಆಶ್ರಮಶಾಲೆಗಳು, ವೃತ್ತಿ ಶಿಕ್ಷಣ ಸಂಸ್ಥೆಗಳು, ಸಮಾಜ ಕಲ್ಯಾಣ ಹಾಗೂ ಅಲ್ಪಸಂಖ್ಯಾತ ಇಲಾಖೆಯ ವಿದ್ಯಾರ್ಥಿನಿಲಯಗಳಿವೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೧೩ ಪದವಿಪೂರ್ವ ಕಾಲೇಜುಗಳಿದ್ದು ೨,೩೦೨ ಬಾಲಕರು ಹಾಗೂ ೨,೧೭೭ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು.

ವಿದ್ಯಾರ್ಥಿನಿಲಯಗಳು : ಪರಿಶಿಷ್ಟಜಾತಿ ವಿದ್ಯಾರ್ಥಿ ನಿಲಯಗಳಲ್ಲಿ ಆರು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ೩೨೫ ವಿದ್ಯಾರ್ಥಿಗಳು, ಮೆಟ್ರಿಕ್ ನಂತರದ ಒಂದು ವಿದ್ಯಾರ್ಥಿನಿಲಯದಲ್ಲಿ ೧೫೦ ವಿದ್ಯಾರ್ಥಿಗಳು, ಅನುದಾನಿತ ಮೆಟ್ರಿಕ್ ನಂತರದ ಒಂದು ವಿದ್ಯಾರ್ಥಿನಿಲಯದಲ್ಲಿ ೭೫ ವಿದ್ಯಾರ್ಥಿಗಳಿದ್ದಾರೆ. ಪರಿಶಿಷ್ಟ ಪಂಗಡದ ಎರಡು ವಿದ್ಯಾರ್ಥಿನಿಲಯಗಳಲ್ಲಿ ೧೦೦ವಿದ್ಯಾರ್ಥಿಗಳಿದ್ದರು. ಹಿಂದುಳಿದ ವರ್ಗದ ಆರು ವಿದ್ಯಾರ್ಥಿನಿಲಯಗಳಲ್ಲಿ ೩೦೫ ವಿದ್ಯಾರ್ಥಿಗಳು, ಎರಡು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ೧೨೫ ವಿದ್ಯಾರ್ಥಿಗಳು, ಎರಡು ಅನುದಾನಿತ ಮೆಟ್ರಿಕ್ ಪೂರ್ವದ ವಿದ್ಯಾರ್ಥಿನಿಲಯಗಳಲ್ಲಿ ೭೫ ವಿದ್ಯಾರ್ಥಿಗಳು ಸೌಲಭ್ಯ ಪಡೆಯುತಿದ್ದರು. ೨೦೦೯ರ ಮಾಹಿತಿಗೆ ಅನುಬಂಧ–II ನೋಡಿ.

ಪದವಿ ಶಿಕ್ಷಣ : ತಾಲೂಕಿನಲ್ಲಿ ಸ್ವಾತಂತ್ರ್ಯಾನಂತರ ಉನ್ನತ ಶಿಕ್ಷಣದ ಪ್ರಗತಿ ಚುರುಕುಗೊಂಡಿತು. ಸರ್ಕಾರ, ಪುರಸಭೆ ಹಾಗೂ ತಾಲೂಕು ಮಂಡಳಿಗಳು ಪ್ರಾರಂಭಿಸಿದ ಪ್ರೌಢಶಾಲೆಗಳಿಂದ ಹೊರಬಂದ ವಿದ್ಯಾರ್ಥಿಗಳು ತಮ್ಮ ಉನ್ನತ ವ್ಯಾಸಂಗಕ್ಕಾಗಿ ಮೈಸೂರು, ಬೆಂಗಳೂರು ಮುಂತಾದ ಪ್ರದೇಶಗಳಿಗೆ ಹೋಗಬೇಕಾದ ಅನಿವಾರ್ಯತೆ ಇದ್ದಿತು. ಅವರ ಉನ್ನತ ವ್ಯಾಸಂಗ ಸುಗಮಗೊಳಿಸಲು ಹುಣಸೂರಿನ ಪುರಸಭೆ ವತಿಯಿಂದ ೧೯೭೧ರಲ್ಲಿ ಹುಣಸೂರಿನಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲಾಯಿತು. ೧೯೯೧ರ ನಂತರ ಸರ್ಕಾರ ಇದನ್ನು ಕಾಲೇಜು ಶಿಕ್ಷಣ ಇಲಾಖೆಗೆ ವಹಿಸಿತು. ಪ್ರಸ್ತುತ ಇದು ಶ್ರೀ.ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಎಂದು ನಾಮಕರಣಗೊಂಡಿದೆ. ೨೦೦೫ರ ಮಾಹಿತಿಯಂತೆ ಹುಣಸೂರು ತಾಲೂಕಿನಲ್ಲಿ ನಾಲ್ಕು ಪದವಿ ಕಾಲೇಜು (ಮತ್ತೊಂದು ವಿ.ವಿ.ಎಸ್. ಪ್ರಥಮ ದರ್ಜೆ ಕಾಲೇಜು, ರತ್ನಪುರಿ)ಗಳಿದ್ದು ಇವುಗಳಲ್ಲಿ ೧,೦೩೧ ವಿದ್ಯಾರ್ಥಿಗಳು ಹಾಗೂ ೫೭೯ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದರು. ಆದರೆ ತಾಲೂಕಿನಲ್ಲಿ ಯಾವ ಪದವಿ ಕಾಲೇಜಿನಲ್ಲೂ ಪದವಿ ಹಂತದಲ್ಲಿ ವಿಜ್ಞಾನ ವಿಷಯಗಳ ಕಲಿಕೆಗೆ ಅವಕಾಶವಿಲ್ಲ. ಆಸಕ್ತ ವಿದ್ಯಾರ್ಥಿಗಳು ವಿಜ್ಞಾನ ಕಲಿಯಲು ಮೈಸೂರು ಅಥವಾ ಕೃಷ್ಣರಾಜನಗರಗಳಿಗೆ ಹೋಗಬೇಕಾಗಿರುವ ಅನಿವಾರ್ಯತೆ ಇದೆ. ಪಾಲಿಟೆಕ್ನಿಕ್, ಇಂಜಿನಿಯರಿಂಗ್, ಶಿಕ್ಷಕರ ತರಬೇತಿ ಕೇಂದ್ರ (ಡಿ.ಟಿ.ಹೆಚ್.) ಶಿಕ್ಷಕರ ಪ್ರಶಿಕ್ಷಣ ಸಂಸ್ಥೆ(ಬಿ.ಟಿ.ಹೆಚ್), ಕಾನೂನು

ಶಿಕ್ಷಣ, ನರ್ಸಿಂಗ್ ತರಬೇತಿ ಶಾಲೆ, ಗಣಕ ವಿಜ್ಞಾನ ಇವೇ ಮುಂತಾದ ಕಾಲೇಜುಗಳನ್ನು ಹುಣಸೂರಿನಲ್ಲಿ ಸ್ಥಾಪಿಸಬೇಕೆಂಬುದು ಇಲ್ಲಿನ ಜನಸಮುದಾಯದ ಬೇಡಿಕೆಯಾಗಿದೆ.

ಗ್ರಂಥಾಲಯಗಳು : ೧೯೬೫ರಲ್ಲಿ ಜಾರಿಯಾದ ಸಾರ್ವಜನಿಕ ಗ್ರಂಥಾಲಯ ಕಾಯ್ದೆಗಳ ಉಪವಿಧಿಗಳನ್ವಯ ಹುಣಸೂರಿನಲ್ಲಿ ೧೯೮೭ರಲ್ಲಿ ತಾಲೂಕು ಗ್ರಂಥಾಲಯ ಸ್ಥಾಪನೆಯಾಯಿತು. ಗ್ರಾಮೀಣ ಗ್ರಂಥಾಲಯ ಯೋಜನೆ ೧೯೮೫ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರಂತೆ ಮಂಡಲಕ್ಕೊಂದರಂತೆ ಗ್ರಂಥಾಲಯಗಳು ಪ್ರಾರಂಭವಾದವು. ಎಲ್ಲಾ ಗ್ರಂಥಾಲಯಗಳಲ್ಲಿ ಉಚಿತ ಓದುವ ವ್ಯವಸ್ಥೆ ಮಾಡಲಾಗಿದ್ದು, ದಿನಪತ್ರಿಕೆಗಳು, ನಿಯತಕಾಲಿಕೆಗಳು, ರಾಜ್ಯಪತ್ರಗಳು, ಉದ್ಯೋಗ ಮಾಹಿತಿ ಪತ್ರಿಕೆಗಳು, ಸಾಮಾನ್ಯ ಜ್ಞಾನದ ಪುಸ್ತಕಗಳು, ಹಾಗೂ ಇತರೆ ಶೈಕ್ಷಣಿಕ ಸಾಮಗ್ರಿಗಳನ್ನು ಒದಗಿಸಲಾಗಿದೆ. ಹುಣಸೂರು ಪಟ್ಟಣದ ಗ್ರಂಥಾಲಯದಲ್ಲಿ ಪರಾಮರ್ಶನ ವಿಭಾಗವನ್ನೂ ತೆರೆಯಲಾಗಿದೆ. ಹುಣಸೂರು ತಾಲೂಕಿನಲ್ಲಿ ೨೦೧೯ರ ಮಾರ್ಚ್ ಅಂತ್ಯಕ್ಕೆ ೩೨ ಗ್ರಂಥಾಲಯಗಳಿದ್ದು, ಎಲ್ಲಾ ಗ್ರಾಮಪಂಚಾಯ್ತಿಗಳು ಗ್ರಂಥಾಲಯವನ್ನು ಹೊಂದಿದ್ದವು.

ಕ್ರೀಡೆ

ಪ್ರಾಚೀನ ಕಾಲದ ಹಲವಾರು ಜನಪದ ಆಟಗಳು ಹುಣಸೂರು ತಾಲೂಕಿನಲ್ಲಿ ಪ್ರಚಲಿತವಿವೆ. ಇತ್ತೀಚೆಗೆ ಕೆಲವು ಆಟಗಳೂ ಹುಟ್ಟಿಕೊಂಡಿವೆ. ಆದಿಮಾನವ ತನ್ನ ಹೊಟ್ಟೆಪಾಡಿಗಾಗಿ ನಡೆಸುತ್ತಿದ್ದ ಬೇಟೆ ಮುಂದೆ ಒಂದು ಕ್ರೀಡೆಯಾಗಿ ಬೆಳೆದುದನ್ನೂ ಗಮನಿಸಿದರೆ ಇಂದಿನ ಹಲವಾರು ಕ್ರೀಡೆಗಳ ಮೂಲವೂ ಬಹು ಹಿಂದಿನವೆಂದು ಊಹಿಸಬಹುದಾಗಿದೆ. ರಾಮಾಯಣ, ಮಹಾಭಾರತಗಳಲ್ಲಿ ಪಗಡೆಯಂತಹ ಹಲವು ಒಳಾಂಗಣ ಕ್ರೀಡೆಗಳ ಉಲ್ಲೇಖವಿದ್ದು, ಬೇಟೆ, ಮಲ್ಲಯುದ್ಧ, ಜಲಯುದ್ಧ, ದೃಷ್ಟಿಯುದ್ಧ, ಗಧಾಯುದ್ಧ, ಧನುರ್ವಿದ್ಯೆ, ಕತ್ತಿವರಸೆ, ಈಜು, ಹಾಗೂ ಕುದುರೆ ಸವಾರಿಗಳಂತಹ ಎಲ್ಲವೂ ಕ್ರೀಡೆಗಳ ಪರಿಧಿಯೊಳಗೆ ಸೇರುತ್ತವೆ.

ತಾಲೂಕಿನಲ್ಲಿರುವ ಗ್ರಾಮೀಣ ಕ್ರೀಡೆಗಳನ್ನು ಲಿಂಗ, ವಯಸ್ಸುಗಳ ಭೇದದಿಂದ ಈ ರೀತಿ ವಿಂಗಡಿಸಬಹುದು.

ಹೆಣ್ಣು ಮಕ್ಕಳ ಆಟಗಳು : ಕುಂಟೆಬಿಲ್ಲೆ, ಆಣ್ಣೆಕಲ್ಲಾಟ, ಕಂಬದಾಟ, ಹಗ್ಗದಾಟ, ಬಳೇಗಾಜಾಟ, ಕುಂಟಾಟ, ಗಿರಿಗಿಟ್ಲೆ, ಅಚ್ಚಚ್ಚು–ಬೆಲ್ಲದಚ್ಚು, ಕುಕ್ಕರಬಸವಿ ಹಾಗೂ ಜೂಟಾಟ ಮುಂತಾದವು; **ಗಂಡುಮಕ್ಕಳ ಆಟಗಳು :** ಚಿನ್ನಿದಾಂಡು, ಲಗೋರಿ, ಮರಕೋತಿ, ಐಸ್‌ಪೈಸ್, ಆರ್‌ಗೋಲ್‌ಬೀರ್‌ಗೋಲ್, ಬುಗುರಿ, ಗೋಲಿ, ಕಳ್ಳ–ಪೊಲೀಸ್ ಕುದುರೆಕೂರಿಸುವ ಆಟ, ಗೇರುಬೇರು ಮುಂತಾದವು; **ದೊಡ್ಡವರ ಆಟಗಳು :** ಪಗಡೆ, ಚದುರಂಗ, ಇಸ್ಪೀಟ್, ಆಟುಗು ಚೌಕಾಬಾರ, ಹಾವು–ಏಣಿ ಆಟ.

ಮಕ್ಕಳಾಟ : ಕಣ್ಣೆಮುಚ್ಚೆಕಾಡೆಗೂಡೆ, ಗೊಂಬೆಯಾಟ, ಕಲ್ಲು–ಮಣ್ಣಿನ ಆಟ, ಜೊತೆಗೆ ಹದಿವಯಸ್ಕರ ಸಾಹಸದ ಆಟಗಳಾದ ದೊಣ್ಣೆವರಸೆ, ಕತ್ತಿವರಸೆ, ಕುಸ್ತಿ, ಬಿಲ್ಲುಬಾಣ

ಮುಂತಾದವೂ ತಾಲೂಕಿನ ಕ್ರೀಡೆಗಳಲ್ಲಿ ಸೇರಿವೆ. ಹಲವಾರು ಆಟಗಳನ್ನು ಆಡುವಾಗ ಹಾಡುಗಳನ್ನು ಹೇಳುವುದುಂಟು. ಕೋಲಾಟದಲ್ಲಿ ಜಡೆ ಕೋಲಾಟ, ಉಯ್ಯಾಲೆ ಕೋಲಾಟ ಮುಂತಾದವುಗಳಿವೆ, ಸಾಮಾನ್ಯವಾಗಿ ಇವುಗಳನ್ನು ಹಾಡುಗಳ ಸಮೇತ ಆಡುತ್ತಾರೆ. ಈ ಸರಳಸುಂದರ ಹಾಡು ಮತ್ತು ಗೀತೆಗಳನ್ನು ಆಟಗಾರರಿಗೆ ಹಾಗೂ ಮಕ್ಕಳಿಗೆ ಬಾಯಿಪಾಠ ಮಾಡಿಸುವ ಶೈಕ್ಷಣಿಕ ಉದ್ದೇಶವನ್ನೂ ಇಲ್ಲಿ ಕಾಣಬಹುದಾಗಿದೆ.

ತಾಲೂಕಿನ ಜನಸಾಮಾನ್ಯರ ಮತ್ತೊಂದು ಜನಪ್ರಿಯ ಕ್ರೀಡೆ ಕುಸ್ತಿ. ಶಾರೀರಿಕ ಶಕ್ತಿಯನ್ನು ವೈಜ್ಞಾನಿಕವಾಗಿ ಬೆಳೆಸಿಕೊಂಡು ಅದನ್ನು ನಿಯಮಬದ್ಧವಾಗಿ ಉಪಯೋಗಿಸಿ ಎದುರಾಳಿಯನ್ನು ಸೋಲಿಸುವ ಸಾಮಾರ್ಥ್ಯವೇ ಕುಸ್ತಿ. ಈ ತಾಲೂಕಿನವರು ಜಿಲ್ಲಾ ಹಾಗೂ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿರುವರು. ಹುಣಸೂರಿನ ಕಲ್ಕುಣಿಕೆ ಕುಸ್ತಿ ಕಲೆಯಲ್ಲಿ ಇಡೀ ಜಿಲ್ಲೆಯಲ್ಲಿಯೇ ಪ್ರಸಿದ್ಧವಾಗಿದೆ. ಬಿಳಿಕೆರೆಯ ಮಂಜುನಾಥ್ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಹಾಗೂ ರಾಜ್ಯಮಟ್ಟದ ಕುಸ್ತಿ ಪಂದ್ಯಗಳಲ್ಲಿ ವಿಜಯಿಯಾಗಿ ತಾಲೂಕಿಗೆ ಕೀರ್ತಿ ತಂದಿದ್ದಾರೆ. ಹುಣಸೂರಿನ ಸ್ವಾಮಿಗೌಂಡರ್ ಅತ್ಯುತ್ತಮ ಯೋಗಾಸನ ಪಟುವಾಗಿ ಅಂತಾರಾಷ್ಟ್ರೀಯ ಮಟ್ಟದ ಯೋಗಾಸನ ಪ್ರದರ್ಶನದಲ್ಲಿ ಭಾಗವಹಿಸಿ ತಾಲ್ಲೂಕಿಗೆ ಕೀರ್ತಿ ತಂದಿದ್ದಾರೆ.

ಕಬಡ್ಡಿ : ತಾಲೂಕಿನ ಕ್ರೀಡೆಗಳಲ್ಲಿ ಕಬಡ್ಡಿ ಆಟದಲ್ಲಿ ಇಲ್ಲಿನ 'ಶಿವಾಜಿ' ತಂಡ ಪ್ರಮುಖಸ್ಥಾನ ಪಡೆದಿದೆ. ೧೯೬೯–೭೦ರ ರಾಜ್ಯಮಟ್ಟದ ದಸರಾ ಕ್ರೀಡಾಕೂಟದಲ್ಲಿ ಪ್ರಶಸ್ತಿಗಳಿಸಿದೆ. ಮುನೇಶ್ವರ ಕಬಡ್ಡಿ ತಂಡವೂ ತಾಲೂಕಿನ ಜನಪ್ರಿಯ ತಂಡವಾಗಿದೆ. ಹುಣಸೂರಿನ ಎಚ್.ಎಸ್. ಚಂದ್ರಶೇಖರ್ ಅವರು ೧೯೮೦–೮೩ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕಬ್ಬಡ್ಡಿ ತಂಡದ ಕ್ಯಾಪ್ಟನ್ ಆಗಿದ್ದರು. ೧೯೮೧–೮೨ರ ಅಖಿಲ ಭಾರತ ಮಟ್ಟದ ಕಬ್ಬಡ್ಡಿ ಸ್ಪರ್ಧೆಯಲ್ಲಿ ಗುಜರಾತ್‌ನ ಸರ್ದಾರ್ ವಲ್ಲಭಬಾಯ್ ಪಟೇಲ್ ವಿಶ್ವವಿದ್ಯಾನಿಲಯ ಹಾಗೂ ೧೯೮೨–೮೩ರಲ್ಲಿ ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಸ್ಪರ್ಧೆಯಲ್ಲಿ ಮುಖಂಡತ್ವ ವಹಿಸಿ ವಿಜಯ ಸಾಧಿಸಿ ರಾಜ್ಯಕ್ಕೆ ಹೆಸರು ತಂದಿದ್ದಾರೆ.

ಬಾಲ್‌ಬ್ಯಾಡ್‌ಮಿಂಟನ್ : ಇದು ಹುಣಸೂರು ಪ್ರದೇಶದ ಮತ್ತೊಂದು ಜನಪ್ರಿಯ ಕ್ರೀಡೆ. ಸತ್ಯನಾರಾಯಣ ಕ್ಲಬ್, ಜೈವೀರ್ ಸ್ಪೋರ್ಟ್ಸ್ ಕ್ಲಬ್‌ಗಳು ಆಸಕ್ತ ಯುವ ಕ್ರೀಡಾ ಪಟುಗಳಿಗೆ ತರಬೇತಿ ನೀಡುತ್ತಿವೆ.

ತಾಲೂಕಿನಲ್ಲಿ ಪುಟ್‌ಬಾಲ್, ಕ್ರಿಕೆಟ್, ಖೋಖೋ ಮುಂತಾದ ಕ್ರೀಡೆಗಳೂ ಜನಪ್ರಿಯವಾಗಿವೆ. ೧೯೬ರಲ್ಲಿ ಕಲ್ಬುರ್ಗಿಯಲ್ಲಿ ನಡೆದ ರಾಜ್ಯ ಮಟ್ಟದ ಖೋಖೋ ಸ್ಪರ್ಧೆಯಲ್ಲಿ ಈ ತಾಲೂಕಿನ ಕುಮಾರಿ ಎಂಬುವರು ಭಾಗವಹಿಸಿದ್ದರು. ಅಥ್ಲೆಟಿಕ್ ವಿಭಾಗದಲ್ಲಿ ವೇಣುಗೋಪಾಲ್ ರವರು ೧೦೦ ಮೀ, ೫೦೦೦ಮೀ, ಓಟದ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಗಳಿಸಿದ್ದಾರೆ. ೧೯೯ರಲ್ಲಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾದ ಮಾಲತಿ, ಕೆ.ಟಿ. ರಾಜಮ್ಮ, ಜ್ಯೋತಿ ಮತ್ತು ನೀತಿ ಎಂಬುವವರು

ರಾಜ್ಯಮಟ್ಟದಲ್ಲಿ ೧೦೦ x ೪ ಮೀ. ರಿಲೇ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ. ೨೦೦೩-೦೪ನೆಯ ಸಾಲಿನ ರಾಜ್ಯಮಟ್ಟದ ಗುಡ್ಡಗಾಡು ಓಟದ ಸ್ಪರ್ಧೆಯಲ್ಲಿ ಹನಗೊಡು ಹೋಬಳಿಯ ಕೆ.ಕೆ. ತಾರಾ ೪ನೆಯ ಸ್ಥಾನ ಪಡೆದಿದ್ದಾರೆ. ೨೦೦೩ರಲ್ಲಿ ಬಿಜಾಪುರದಲ್ಲಿ ನಡೆದ ಮಹಿಳಾ ಕಬಡ್ಡಿಯಲ್ಲಿ ಹನಗೂಡಿನ ಪಿ.ಕೆ. ಶೈಲಜ, ಡಿ. ಶಾಂತಮ್ಮ, ಜೆ.ಎಂ. ಅಚಿತಾರವರು ಮೈಸೂರು ಜಿಲ್ಲಾ ತಂಡವನ್ನು ಪ್ರತಿನಿಧಿಸಿ ತಾಲೂಕಿಗೆ ಕೀರ್ತಿ ತಂದಿದ್ದಾರೆ.

ಕ್ರೀಡಾಕ್ಲಬ್‌ಗಳು

ಹುಣಸೂರು ಕ್ಲಬ್ : ದೀಕ್ಷಿತ್ ಅವರಿಂದ ೧೯೨೭ರಲ್ಲಿ ಆರಂಭಗೊಂಡ ಈ ಕ್ಲಬ್ ಇಂದಿಗೂ ಅತ್ಯಂತ ಕ್ರಿಯಾಶೀಲವಾಗಿದೆ. ಇಲ್ಲಿ ಟೆನಿಸ್ ಆಟಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿದೆ. ಇಲ್ಲಿ ಡಿ. ದೇವರಾಜ ಅರಸ್, ಎಚ್.ಎಲ್. ತಿಮ್ಮೇಗೌಡ ಅವರೂ ಸದಸ್ಯರಾಗಿ ಟೆನಿಸ್ ಆಡಿರುವುದು ವಿಶೇಷ. ಹುಣಸೂರು ಕಾಫಿ ವರ್ಕ್ಸ್ ಕ್ಲಬ್ ಸಹ ಅನೇಕ ಪ್ರತಿಭಾವಂತ ಕ್ರಿಕೆಟ್, ಬಾಲ್‌ಬ್ಯಾಡ್‌ಮಿಂಟನ್ ಆಟಗಾರರನ್ನು ನಾಡಿಗೆ ಪರಿಚಯಿಸಿದೆ. ಇಲ್ಲಿನ ಸತ್ಯನಾರಾಯಣ ಸ್ಪೋರ್ಟ್ಸ್ ಕ್ಲಬ್, ಆಶ್ರಯದಲ್ಲಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ (ದಿ) ಆರ್. ಗುಂಡುರಾವ್ ಬ್ಯಾಡ್‌ಮಿಂಟನ್ ಆಟವಾಡಿದ್ದಾರೆ. ಜಯವೀರ್ ಕ್ರೀಡಾ ಕ್ಲಬ್ ಮುಂತಾದ ಕ್ಲಬ್‌ಗಳು ಸತತವಾಗಿ ಮೂರು ವರ್ಷಗಳ ಕಾಲ ರಾಜ್ಯಮಟ್ಟದ ಗೋಲ್ಡ್ ಮೆಡಲ್ ಟೂರ್ನಮೆಂಟ್ಸ್ ನಡೆಸಿವೆ.

ಭಾರತ್ ಸ್ಪೋರ್ಟ್ಸ್ ಕ್ಲಬ್ : ಹುಣಸೂರಿನಲ್ಲಿ ಹೊನಲು ಬೆಳಕಿನ ಟೆನಿಸ್‌ಬಾಲ್ ಕ್ರಿಕೆಟ್ ಟೂರ್ನಮೆಂಟನ್ನು ಈ ಕ್ಲಬ್ ಆಯೋಜಿಸಿತ್ತು. ೧೯೮೩ರಲ್ಲಿ ಹೊನಲು ಬೆಳಕಿನ ಟೆನಿಸ್‌ಬಾಲ್ ಕ್ರಿಕೆಟ್, ೧೯೮೫ರಲ್ಲಿ ಮೈಸೂರು ವಿಭಾಗದ ಲೆದರ್‌ಬಾಲ್ ಕ್ರಿಕೆಟ್ ಟೂರ್ನಮೆಂಟ್, ೧೯೮೮ರಲ್ಲಿ ರಾಜ್ಯಮಟ್ಟದ ಕ್ರಿಕೆಟ್ ಟೂರ್ನಿಮೆಂಟ್ ಹಾಗೂ ೧೯೯೨ರಲ್ಲಿ ರಾಜ್ಯಮಟ್ಟದ ಹೊನಲು ಬೆಳಕಿನ ಟೆನಿಸ್‌ಬಾಲ್ ಕ್ರಿಕೆಟ್ ಟೂರ್ನಮೆಂಟನ್ನು ನಡೆಸಿ ಈ ಕ್ಲಬ್ ಹುಣಸೂರಿಗೆ ಹೆಸರು ತಂದಿದೆ. ಈ ಕ್ಲಬ್‌ನ ಆಶ್ರಯದಲ್ಲಿ ನಡೆದ ಕ್ರಿಕೆಟ್ ಪಂದ್ಯಗಳಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಜಾವಗಲ್ ಶ್ರೀನಾಥ್, ರಾಜ್ಯ ಆಟಗಾರರಾದ ಎ.ಕೆ.ರಘು, ರವೀಂದ್ರ, ಹಾಸನ ಗಣೇಶ್, ಸನತ್‌ಕುಮಾರ್, ಸರ್ವೋತ್ತಮ ಮುಂತಾದ ಪ್ರತಿಭಾವಂತ ಆಟಗಾರರಾಗಿದ್ದರು. ಇಲ್ಲಿನ ಯುವಜನ ಬಳಗದ ಆಶ್ರಯದಲ್ಲಿ ೧೯೭೮ರಲ್ಲಿ ವಿಭಾಗ ಮಟ್ಟದ ಬಾಲ್‌ಬ್ಯಾಡ್‌ಮಿಂಟನ್ ಟೂರ್ನಮೆಂಟ್ ನಡೆದಿದೆ. ೧೯೭೯ರಲ್ಲಿ ವಿಭಾಗೀಯ ಮಟ್ಟದ ವಾರ್ಸಿಟಿ ತಂಡದ ಆಯ್ಕೆಯ ಸ್ಪರ್ಧೆಯೂ ನಡೆದಿತ್ತು.

* * * *